
ಸನ್ನದ್ಧ ಸ್ಥಿತಿಯಲ್ಲಿಯೇ ಇರುತ್ತದೆ. ಸಿಕ್ಕ ಸಣ್ಣ ಅವಕಾಶವನ್ನೂ ಹೆಣ್ಣು ವ್ಯರ್ಥಹೋಗಗೊಡುವುದಿಲ್ಲ ಎನ್ನುವುದು. ಈ ಮಹಿಳೆಯರಾದರೂ ಅದಕ್ಕೆ ಅತ್ಯುತ್ತಮ ಉದಾಹರಣೆಗಳಾಗಿದ್ದಾರೆ. ಸಂಜೆ ವಾಯುವಿಹಾರಕ್ಕೆ ಗಂಡ ಕರೆದೊಯ್ಯುತ್ತಿದ್ದರು ಎನ್ನುವುದೇ ಬದಲಾವಣೆಯ ಪರ್ವದಂತೆ ಇವರಿಗೆ ಕಾಣಿಸುತ್ತದೆ ಎಂದರೆ, ಮಿಕ್ಕದ್ದನ್ನು ನಾವು ಊಹಿಸಬಹುದು.

ಎರಡನೆಯ ಘಟ್ಟದ ಆತ್ಮಕಥನಗಳು ದಾರಿಯೆರಡರ ನಡುವಿನ ದಟ್ಟ ಮಂಜಿನ ಕಥನಗಳು. ಬಲು ಸಂಕೀರ್ಣವಾದ ಸವಾಲುಗಳನ್ನು ಎದುರಿಸಿದವು. ಮೊದಲನೆಯ ಘಟ್ಟದ ಸ್ವಶೋಧದ ಮುಂದಿನ ಘಟ್ಟವಾದ 'ಅಸ್ತಿತ್ವ'ದ ಘಟ್ಟ. ಹಿಂದೆ ಸರಿಯಲಾಗದ ಮುಂದೆ ಹೋಗಲಾಗದ ದಿಗ್ಭ್ರಮೆಯಲ್ಲಿ ಹೆಣ್ಣು ತನ್ನನ್ನು ತಾನು ಸಂಭಾಳಿಸಿಕೊಳ್ಳಲು ಹೆಣಗಿದ ಸಮಯವದು. ಹೋರಾಟದ ಸದಾ ಸನ್ನದ್ಧ ಸ್ಥಿತಿಯ ಪರಂಪರೆ ತನ್ನ ಬೆನ್ನಿಗಿದ್ದೂ ತನ್ನೆದುರಿಗಿರುವ ಮೌಲ್ಯವ್ಯವಸ್ಥೆ ಮತ್ತು ಅದಕ್ಕಿರುವ ಅಸೀಮ ಬಲ ತನ್ನನ್ನು ಮುಂದೆಂದೂ ಏಳಲಾರದಂತೆ ತುಳಿದುಬಿಟ್ಟರೆ ಎನ್ನುವ ಭಯ, ಆದರೂ ಕಣ್ಣೆದುರಿಗಿನ ದಾರಿಯಲ್ಲಿ ಸಾಗಬೇಕೆನ್ನುವ ತವಕ ಎರಡೂ ತೀವ್ರವಾಗಿ ಈ ಕಾಲದ ಆತ್ಮಕಥನಗಳಲ್ಲಿ ಕಾಣಿಸುತ್ತದೆ. ಭಾಗೀರಥಿ ಹೆಗಡೆ, ಗಂಗಾ ಪಾದೇಕಲ್, ಸರೋಜಿನಿ ಚವಲಾರ ಮೊದಲಾದವರ ಬರಹಗಳಲ್ಲಿ ಇದು ನಮ್ಮ ಅನುಭವಕ್ಕೆ ಬರುತ್ತದೆ. ಕ್ಷುಲ್ಲಕವೆಂದು ಕಾಣಬಹುದಾದ ಆದರೆ ನಮ್ಮನ್ನು ಗಾಢವಾಗಿ ಕಲಕುವ ಒಂದು ಘಟನೆಯನ್ನು ಭಾಗೀರಥಿ ಹೆಗಡೆಯವರ ಬದುಕಿನಿಂದ ನೋಡಬಹುದು. ಯಾವುದೋ ಶಾಲೆಯದೋ ಕಾಲೇಜಿನದೋ ಒಂದು ಕಾರ್ಯಕ್ರಮಕ್ಕೆ ಆಹ್ವಾನ ಪತ್ರಿಕೆಯನ್ನು ಕೊಡಲು ಬಂದ ಅಟೆಂಡರನಿಗೆ 'ಕಾಫಿ ಕೊಡುತ್ತೇನೆ ಇರು' ಎಂದು ಇವರು ಎಂದದ್ದೇ ಅಲ್ಲೇ ಕುಳಿತಿದ್ದ ಗಂಡ 'ಕಾಫಿಗೆ ಹಾಲು ಇದೆಯೇನೇ' ಎಂದು ಕೇಳುತ್ತಾರೆ! ಅದು ಹಾಲು ಇರುವ ಇಲ್ಲದ ಪ್ರಶ್ನೆಯಲ್ಲ, ಹೆಂಡತಿಯ ಬರವಣಿಗೆ, ಆಕೆಯ ಸಾರ್ವಜನಿಕ ಜೀವನದ ಬಗ್ಗೆ ತನಗಿರುವ ಅಸಹನೆಯನ್ನು ಹೊರಹಾಕುವ, ಅವಳ ಆತ್ಮವಿಶ್ವಾಸವನ್ನು ಕುಗ್ಗಿಸುವ ಕುಬ್ಜ ಮನಃಸ್ಥಿತಿಯ ಪ್ರಕಟಣೆ. ಅಟೆಂಡರನ ಎದುರಿಗೆ ನಡೆಯುವ ಈ ಪ್ರಸಂಗವನ್ನು ಹೇಗೆ ಎದುರಿಸಬೇಕು? ಸಂಜೆ ಕಾರ್ಯಕ್ರಮಕ್ಕೆ ಹೇಗೆ ಹೋಗಬೇಕು? ಅಲ್ಲಿ ಇವನು ಇದನ್ನು ಎಲ್ಲರಿಗೂ ಹೇಳಿಬಿಟ್ಟಿದ್ದರೆ ಅವರೆಲ್ಲ ತನ್ನನ್ನು ಹೇಗೆ ನೋಡಿಯಾರು? ಈ ಎಲ್ಲ ಒತ್ತಡದಲ್ಲಿ ಭಾಷಣ ಹೇಗಾದೀತು? ಯಾವ ಉತ್ಸಾಹದಲ್ಲಿ ಕಾರ್ಯಕ್ರಮಕ್ಕೆ ಹೋಗಬೇಕು? 'ಕಿಚ್ಚಿಲ್ಲದ ಬೇಗೆ, ಏರಿಲ್ಲದ ಗಾಯ' ಎಂದರೆ ಇದೇ ಅಲ್ಲವೆ? ಗಂಗಾ ಪಾದೇಕಲ್ ತಾವು ಬರೆದ ಬರಹಗಳನ್ನು ಪೋಸ್ಟ್ ಮಾಡಲು ನಾಲ್ಕಾಣೆ ಕೇಳಲು ಒದ್ದಾಡುವ, ಪ್ರಿಯವಾದ ಪತ್ರಿಕೆಗಳನ್ನು ಮನೆಗೆ ತರಿಸಲು ಅನುಮತಿ ಬೇಡಬೇಕಾದ ಗಳಿಗೆಗಳು ಹೆಣ್ಣಿನ ಹಾದಿಯ ಕಷ್ಟಗಳನ್ನು ಬಿಡಿಸಿ ಬಿಡಿಸಿ ತೋರಿಸುತ್ತವೆ.




ಆರಂಭದಲ್ಲಿ ನಾನು ಇದೊಂದು ರಾಜಕೀಯ ಹೋರಾಟವೂ ಹೌದು ಎಂದೆ. ಸ್ವಪ್ರಜ್ಞೆಯ ಅನಾವರಣದ ಪ್ರಕ್ರಿಯೆಯೇ ರಾಜಕೀಯ ಹೋರಾಟದ ಮೊದಲ ಹೆಜ್ಜೆ. ತನ್ನ ಅಸ್ತಿತ್ವವನ್ನು ಗ್ರಹಿಸುವುದು, ಅದಕ್ಕೆ ಸಲ್ಲಬೇಕಾದ ಬೆಲೆಯ ಬಗ್ಗೆ ಆಲೋಚಿಸುವುದೇ ಚಹಾ ಲೋಟದ ಒಳಗಿನ ಅಲೆಯ ಕ್ರಾಂತಿ. ಅದು ಸಣ್ಣದಿರಬಹುದು, ಆದರೆ ಖಂಡಿತಕ್ಕೂ ಅದು ಆರಂಭ. ಸರೋಜಿನಿ